ಪರ್ಮನೆಂಟ್ ರೆಕ್ರೂಟಿಯನ್ನು ಅಲ್ಲಿಗೆ ಹಾಕಿದ್ದರೆ ಅವರು ಚೆನ್ನಾಗಿ ಕೆಲಸ ಮಾಡುತ್ತಾರೆ.

ಅಧ್ಯಕ್ಷರು:- ಕಂಟ್ರಾಕ್ಟ್ ಬೇಸಿಸ್ ಮೇಲಿದ್ದವರು ಸರಿಯಾಗಿ ಕೆಲಸ ಮಾಡುವುದಿಲ್ಲ ಪಿ.ಎಸ್.ಸಿ ಮೂಲಕ ಭರ್ತಿ ಮಾಡಿ ಎಂದು ಕೇಳುತ್ತಿದ್ದಾರೆ.

741 (84) ಶ್ರೀ ಎ.ಟಿ.ರಾಮಸ್ವಾಮಿ :

ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹಾಸನ ಜಿಲ್ಲೆಯ ಆಲೂರು ಸಕಲೇಶಪುರ ತಾಲ್ಲೂಕುಗಳು ಕೊಡಗು ಗಡಿಭಾಗಗಳಲ್ಲಿ ಕಾಡಾನೆಗಳ ಹಾವಳಿಯಿಂದ ರೈತರಿಗೆ ತುಂಬಾ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಹಾವಳಿಯನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

3) ನಷ್ಟಕ್ಕೊಳಗಾದ ರೈತರಿಗೆ ಪರಿಹಾರವನ್ನು ಯಾವ ಪ್ರಮಾಣದಲ್ಲಿ ವಿತರಿಸಲಾಗುವುದು?

ಗುರಪಾದಪ್ಪ ನಾಗಮಾರಪಲ್ಲಿ ಅರಣ್ಯ ಸಚಿವರು.

1) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

2) ಕಾಡಾನೆ ಹಾವಳಿಯನ್ನು ತಪ್ಪಿಸಲು ಪ್ರತಿ ವಲಯದಲ್ಲಿ ತಂಡಗಳನ್ನು ನೇಮಿಸಿ ಗಸ್ತು ನಡೆಸಲಾಗುತ್ತಿದೆ. ಆನೆಗಳನ್ನು ಓಡಿಸಲು ಸಿಬ್ಬಂದಿಗೆ ನಿಸ್ತಂತು ಸೆಟ್‌ಗಳನ್ನು ಪಟಾಕಿ ಮುಂತಾದವನ್ನು ಒದಗಿಸಲಾಗಿದೆ. ಗಸ್ತಿಗೆ ವಾಹನಗಳನ್ನು ಒದಗಿಸಿದೆ. ಹೆಚ್ಚು ಬೆಲೆ ಹಾನಿಯಾದ ಕೊಡಗು ಜಿಲ್ಲೆಯಲ್ಲಿ 1995-96ನೇ ಸಾಲಿನಲ್ಲಿ 8 ಕಾಡಾನೆಗಳನ್ನು ಹಿಡಿಯಲಾಗಿದೆ.

3) ಬೆಳೆ ನಷ್ಟಕ್ಕೊಳಗಾದ ರೈತರ ಜಮೀನಿಗೆ ವಲಯ ಅರಣ್ಯಾಧಿಕಾರಿ: ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ:ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಭೇಟಿ ನೀಡಿ ಸಲ್ಲಿಸುವ ಶಿಫಾರಸ್ಸಿನ ಮೇರೆಗೆ ಹಾಗೂ ಮಾನವ ಪ್ರಾಣಹಾನಿಯಾಗಿ ನಷ್ಟಕ್ಕೊಳ್ಳಗಾದವರಿಗೆ ಸರ್ಕಾರ ಆದೇಶ ಸಂಖ್ಯೆ: ಎಹೆಚ್‌ಎಫ್‌ಎಫ್ 100 ಎಫ್‌ಡಬ್ಲ್ಯೂಎಲ್ 89, ದಿನಾಂಕ 2.8.92 ರಲ್ಲಿ ನಿಗಧಿಪಡಿಸಿರುವ ದರಗಳ ಪ್ರಕಾರ ಪರಿಹಾರ ನೀಡಲಾಗುತ್ತಿದೆ.

ಶ್ರೀ ಎ.ಟಿ.ರಾಮಸ್ವಾಮಿ:- ಹಾಸನ ಜಿಲ್ಲೆಯ ಕೊಡಗು ಗಡಿಯಲ್ಲಿರುವ ಅರಕಲಗೂಡು, ಆಲೂರು, ಸಕಲೇಶಪುರ ತಾಲ್ಲೂಕುಗಳಲ್ಲಿ ಕಾಡಾನೆಗಳ ಹಾವಳಿಯಿಂದ ಬಡವರು ಬೆಳೆದಂತಹ ಬೆಳೆ ಬಹಳ ನಷ್ಟವಾಗುತ್ತಿದೆ. ಅದನ್ನು ತಪ್ಪಿಸಲಿಕ್ಕೇನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದೆ. ಪ್ರತಿ ವಲಯದಲ್ಲಿ ತಂಡಗಳನ್ನು ನೇಮಿಸಿಗಸ್ತು ತಿರುಗುವ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ನನಗೆ ತಿಳಿದ ಹಾಗೆ ನಮ್ಮ ತಾಲ್ಲೂಕಿನಲ್ಲಿ ಯಾವ ತಂಡವೂ ಇಲ್ಲ ಯಾವ ಗಸ್ತೂ ತಿರುಗುತ್ತಿಲ್ಲ. ಕಾಡಾನೆಗಳನ್ನು ಓಡಿಸುವುದಕ್ಕೆ ಅವರಿಗೆ ಹೇಳಿರುತ್ತೀರಿ ಕಾಡಾನೆಗಳು ಬಂದಾಗ

ಅವರು ಅಲ್ಲಿ ಇದ್ದರೆ ತಾನೆ, ಆನೆಗಳನ್ನು ಓಡಿಸುವುದಕ್ಕೆ ಪಟಾಕಿಗಳನ್ನು ಹಾರಿಸುತ್ತೇವೆಂದು ಹೇಳಿದ್ದಿರಿ ಕಾಡಾನೆ ಬಂದಾಗ ಅವರು ಅಲ್ಲಿ ಇದ್ದರೆ ತಾನೆ ಪಟಾಕಿ ಸಿಡಿಸುವುದು. ಅವರು ಅಲ್ಲಿ ಇರುವುದಿಲ್ಲ. ಇದರಿಂದ ಬಡವರ ಬೆಳೆ ಬಹಳವಾಗಿ ನಷ್ಟವಾಗುತ್ತದೆ. ಕಳೆದ ವರ್ಷ ಈ ವರ್ಷ ಎಷ್ಟು ಬೆಳೆ ನಷ್ಟವಾಗಿದೆ. ನೀವೇನು ಅದಕ್ಕೆ ಪರಿಹಾರ ಕೊಟ್ಟಿದ್ದೀರಿ. ನಿಮ್ಮ ಆನೆಯನ್ನು ನಿಮ್ಮ ಕಾಡಿನಲ್ಲಿ ಸರಿಯಾಗಿ ನೀವು ಇಟ್ಟುಕೊಳ್ಳಿ. ಇಲ್ಲವೇ ಬೆಳೆ ಎಷ್ಟು ನಷ್ಟವಾಗುತ್ತದೆ ಅದಕ್ಕೆ ತಕ್ಕಂತೆ ಪರಿಹಾರ ಕೊಡಲಿಕ್ಕೆ ನಿಮ್ಮ ಸರಕಾರವೇನು ಕ್ರಮ ತೆಗೆದುಕೊಂಡಿದೆ ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಿಮ್ಮ ಆನೆ ಕಾಡು ಬಿಟ್ಟು ಲೋಕ ಶಕ್ತಿಗೆ ಹೋಗುತ್ತಿದೆಯೇ?

ಶ್ರೀ ಗುರಪಾದಪ್ಪ ನಾಗಮಾರಪಲ್ಲಿ:- ಎಲ್ಲಿಗೂ ಹೋಗುವುದಿಲ್ಲ ಯಾವ ಶಕ್ತಿಗೂ ಹೋಗುವುದಿಲ್ಲ. ಕಾಡಿನಲ್ಲಿ ಆರಾಮವಾಗಿರುತ್ತದೆ. ಯಾವ ಶಕ್ತಿಗೂ ಹೋಗುವುದಿಲ್ಲ.

ಅಧ್ಯಕ್ಷರು:- ಯಾರದ್ದು ಆನೆಯೋ ಏನೋ...

ಶ್ರೀ ಎನ್.ರಾಜಣ್ಣ:- ಈಗ ಕಾಡು ಇಲ್ಲ ಊರೇ ಕಾಡು ಅದಕ್ಕೋಸ್ಕರ ಆನೆ ಕಾಡಿಗೆ ಬರುತ್ತದೆ.

ಅಧ್ಯಕ್ಷರು:- ವ್ಯಾಲೀಡ್ ಪಾಯಿಂಟ್,

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಆನೆ ಎಲ್ಲಾ ಊರಿಗೆ ಬರುತ್ತಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಕಾಡಿನಲ್ಲಿ ಆನೆಗಳಿಗಿಂತ ಊರಿನಲ್ಲಿರುವ ಮನುಷ್ಯರಿಂದ ಜಾಸ್ತಿ ತೊಂದರೆಯಾಗುತ್ತಿದೆ. ಪ್ರಾಣಿಗಳಿಗಿಂತ ಹೆಚ್ಚು ತೊಂದರೆ ಕೊಡತಕ್ಕಂತಹ ಪ್ರಾಣಿಗಳು ಇವೇ ಅದಕ್ಕಾಗಿಯೇ ಊರಿಗೆ ಬರುತ್ತಿವೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಮಂತ್ರಿಗಳ ಕಾಟದಿಂದ ಅದು ಫಲಾನುಭವಿಗಳಿಗೆ ಬಂದಿದೆ.

ಶ್ರೀ ಎನ್.ರಾಜಣ್ಣ: 50 ವರ್ಷಗಳ ಹಿಂದೆ ಬನ್ನೇರುಘಟ್ಟ ಸರ್ಕಲ್‌ವರೆಗೆ ಕಾಡು ಇತ್ತು. ಅವು ಕಾಡನ್ನು ಬಿಟ್ಟು ಮನೆಗೆ ನುಗ್ಗುತ್ತಿವೆ. ವನ್ಯ ಪ್ರಾಣಿ ಎಂದರೆ ತಪ್ಪೇ ಇಲ್ಲ.

ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ: ನಮ್ಮ ತಾಲ್ಲೂಕಿನಲ್ಲಿ ಎಸಿಎಫ್, ರೇಂಜರ್ ಅವರೇ, ಸ್ಮಗ್ಲಿಂಗ್ ಮಾಡುತ್ತಿದ್ದಾರೆ.

ಅಧ್ಯಕ್ಷರು:- ಆನೆಗಳ ಹಾವಳಿ ಜಾಸ್ತಿ ಆಯಿತು. ಮಾನ್ಯ ಶಿವಪ್ಪನವರು ಏನೋ ಹೇಳುತ್ತಾರೆ.

ಶ್ರೀ ಗುರಪಾದಪ್ಪ ನಾಗಮಾರಪಲ್ಲಿ :- ಎಲ್ಲಾ ಸದಸ್ಯರು ಬೇರೆ ಬೇರೆ ಕೇಳಿದರು. ಅದಕ್ಕೆ ನಾನು ಸುಮ್ಮನೆ ನಿಂತಿದ್ದೇನೆ. ನನಗೆ ಅವಕಾಶ ಕೊಟ್ಟರೆ ಉತ್ತರ ಹೇಳುತ್ತೇನೆ. ಮಾನ್ಯ ರಾಮಸ್ವಾಮಿ ಸ್ನೇಹಿತರು ಕೇಳಿದ ಹಾಗೆ ಕಾಡಿನಲ್ಲಿ ನಿಮ್ಮ ಯಾವ ಜನರೂ ಅಲ್ಲಿ ಹೋಗುತ್ತಿಲ್ಲ ಎಂದರು. ನಾವು ವೈರ್‌ಲೆಸ್ ಸೆಟ್ ಕೊಟ್ಟಿದ್ದೇವೆ. ಆನೆಗಳ ಮೇಲೆ ತಿರುಗಾಡುತ್ತಾರೆ. ಒಂದು ವೇಳೆ ನಮ್ಮಗಸ್ತು ದಳದವರು ಯಾರು ಕೆಲಸ ಮಾಡುತ್ತಿಲ್ಲ, ಅಲ್ಲಿ ವಾಹನ ಕೊಟ್ಟರೂ

ತಿರಗಾಡುತ್ತಿಲ್ಲ ಎಂದು ತಾವು ತಿಳಿಸಿದರೆ ನಾನು ಅವರ ಮೇಲೆ ಯಾವ ಕ್ರಮ ತೆಗೆದುಕೊಳ್ಳಬೇಕೋ ಆ ನಿರ್ದಿಷ್ಟವಾದ ತೆಗೆದುಕೊಳ್ಳುತ್ತೇವೆ. ಇದೊಂದು ಇನ್ನೂ ಅಲ್ಲಿ ಪಟಾಕಿಗಳನ್ನು ಹಾರಿಸುವ ವ್ಯವಸ್ಥೆ ಮಾಡುತ್ತಿದ್ದೇವೆ. ಆನೆಗಳ ಕಾಟ ಹೆಚ್ಚಾಗಿದೆ ಎಂದು ಮೊನ್ನೆ ಹೋದ ಸಾರಿ 1996ರಲ್ಲಿ ಕೊಡಗು ಜಿಲ್ಲೆಯಲ್ಲಿ ಎಂಟು ಆನೆಗಳನ್ನು ಹಿಡಿದು ಹಾಕಿದ್ದೇವೆ. ಹಾಗೆ ಆನೆಗಳನ್ನು ಹಿಡಿದು ಹಾಕಿದಾಗ ಪರಿಸರದವರು ನಾನು ಅವರ ಹೆಸರು ತೆಗೆದುಕೊಳ್ಳುವುದಿಲ್ಲ. ದೆಹಲಿಯವರು ಎಲ್ಲಾ ಬಂದು ಏಕೆ ಹಿಡಿದು ಹಾಕಿದ್ದೀರಿ, ಕಾಡಿನಲ್ಲಿ ಒಳಗಡೆ ಬಿಟ್ಟು ಬಿಡಿ ಕಾಡಿನಲ್ಲಿ ಎಂದು ದೊಡ್ಡ ಗಲಾಟೆ ಆಯಿತು. ಈಗ ಎರಡು ವಾದ ಆಗಿ ಬಿಟ್ಟಿದೆ. ಕೆಲವರು ಈ ಕಡೆ ಪಾಪ ರೈತರಿಗೆ ತೊಂದರೆ ಆಗುತ್ತಿದೆ ಎಂದು ಹೇಳುತ್ತಾರೆ. ಬೆಳೆ ಹಾಳಾಗುತ್ತಿದೆ. ಪರಿಸರದವರು ನಮ್ಮ ಜೊತೆ ಗಲಾಟೆ ಮಾಡುತ್ತಿದ್ದಾರೆ. ಆದರೂ ಕೂಡ ನಾವು ಏನು ಮಾಡಬೇಕೋ, ಆ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಪರಿಹಾರದ ಬಗ್ಗೆ ತಾವು ಕೇಳಿದ್ದೀರಿ. ಪರಿಹಾರದ ಬಗ್ಗೆ ನಮ್ಮ ಅಧಿಕಾರಿಗಳು ನೋಡಿ ಅದರ ವ್ಯಾಲುವೇಷನ್ ಮಾಡಿ, ಅದರ ಪ್ರಕಾರ ಪರಿಹಾರ ಕೊಡುತ್ತೇವೆ.

ಶ್ರೀ ಎ.ಟಿ. ರಾಮಸ್ವಾಮಿ: ಸನ್ಮಾನ್ಯ ಅಧ್ಯಕ್ಷತೆ, ಪ್ರತಿ ವಲಯಕ್ಕೆ ನಾವು ಗಸ್ತು ತಂಡಗಳನ್ನು ನೇಮಕ ಮಾಡಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ನಾವು ಕಂಡ ಹಾಗೆ ಗಸ್ತು ತಂಡಗಳನ್ನು ನೇಮಕ ಮಾಡಿಲ್ಲ. ಅವರು ಗಸ್ತು ಕೂಡ ತಿರುಗುತ್ತಿಲ್ಲ. ಕಾಡಾನೆಗಳು ಬಂದು ಈಗ ಏನಾಗಿದೆ ಎಂದರೆ, ಕೊಡಗಿನ ಗಡಿ ಭಾಗದಲ್ಲಿ ಮೊದಲೆಲ್ಲಾ ಅರಣ್ಯ ಇತ್ತು. ಈಗ ಅದನ್ನೆಲ್ಲಾ ಕಾಫಿ ತೋಟ ಮಾಡಿ ಬಿಟ್ಟಿದ್ದಾರೆ. ಆನೆಗಳಿಗೆ ಏನೂ ಆಹಾರ ಸಿಗುವುದಿಲ್ಲ. ಹಾಗಾಗಿ ಆ ಗಡಿ ಭಾಗಗಳಲ್ಲಿರತಕ್ಕ ಅರಕಲಗೂಡು, ಆಲೂರು, ಸಕಲೇಶಪುರ ಹಾಗೂ ಬೇಲೂರು ತಾಲ್ಲೂಕಿಗೆ ಆನೆಗಳು ಬಂದು ಬಹಳ ನಷ್ಟ ಮಾಡುತ್ತಿವೆ. ನೂರಾರು ಜನರಿಗೆ ತೊಂದರೆ ಆಗಿದೆ. ಅವರು ಅನೇಕ ಸಾರಿ ಮನವಿ ಕೊಟ್ಟಿದ್ದಾರೆ. ಪರಿಹಾರ ಕೊಡಿ ಎಂದು ಕೇಳಿದ್ದಾರೆ.

ಅಧ್ಯಕ್ಷರು: ನಮಗೇನು ತೊಂದರೆ ಎಂದರೆ ನಿಮ್ಮನ್ನು ನೋಡಿದಾಗ ನಿಮಗೆ ಯಾವ ನಷ್ಟವೂ ಆದ ಹಾಗೆ ಅನ್ನಿಸುವುದಿಲ್ಲ. ಎಷ್ಟು ತಂಪಾಗಿ, ಲಕ್ಷಣವಾಗಿ ಕಾಣುತ್ತೀರಿ.

ಶ್ರೀ ಎ.ಟಿ.ರಾಮಸ್ವಾಮಿ: ನನಗಲ್ಲಿ, ಜನಕ್ಕೆ ಆಗಿರುವುದು. ಅಲ್ಲಿ ಏನು ನಷ್ಟ ಆಗುತ್ತಿದೆ ಅದಕ್ಕೆ ಪರಿಹಾರ ಕೊಡಬೇಕು. ಈಗ ಏನು ಆಗಿದೆ? ಅಲ್ಲಿ ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಇದ್ದಾರೆ, ಮತ್ತೆ ಡೆಪ್ಯುಟಿ ಕನ್ಸರ್‌ವೇಟರ್ ಇದ್ದಾರೆ, ಚೀಫ್ ಕನ್ಸರ್‌ವೇಟರ್ ಇದ್ದಾರೆ. ಇವರಿಗೆ ಪರಿಹಾರ ಕೊಡಲಿಕ್ಕೆ ಒಂದು ಪವರ್ಸ್ ಕೊಟ್ಟಿದ್ದಾರೆ. ಅವರು ಅರ್ಜಿಗಳನ್ನು ತೆಗೆದುಕೊಂಡು ಸುತ್ತಾಡುವ ಹೊತ್ತಿಗೇ ಅಷ್ಟು ದುಡ್ಡು ಖರ್ಚಾಗಿರುತ್ತದೆ. ನೀವೇನು ಪರಿಹಾರ ಕೊಡುತ್ತೀರಿ? ಎಷ್ಟು ನಷ್ಟ ಆಗಿದೆ? ಆ ಪರಿಹಾರವನ್ನು ಜಿಲ್ಲಾ ಮಟ್ಟದಲ್ಲಿ ವಿತರಣೆ ಮಾಡಲು ನೀವೇನಾದರೂ ಕೂಡ ಕ್ರಮವನ್ನು ಕೈಗೊಳ್ಳುತ್ತೀರಾ? ಕಳೆದ ವರ್ಷ ನಮ್ಮ ಹಾಸನ ಜಿಲ್ಲೆಯಲ್ಲಿ ಎಷ್ಟು ನಷ್ಟ ಆಗಿದೆ? ಕಳೆದ ವರ್ಷದಿಂದ ಇವತ್ತಿನವರೆಗೆ ನಮ್ಮ ಜಿಲ್ಲೆಯಂದ ಸುಮಾರು ನಾಲ್ಕಾರು ಬಾರಿ ನಮ್ಮ ಡಿಎಫ್‌ಓ ಅವರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಆನೆ ಹಿಡಿಯಲಿಕ್ಕೆ ನಮಗೆ ಅನುಮತಿ ಕೊಡಿ ಎಂದು ಪತ್ರ ಬರೆದಿದ್ದಾರೆ. ಪತ್ರ ಬರೆದಿದ್ದಾರೋ ಇಲ್ಲವೋ?

ಅವರು ಪತ್ರ ಬರೆದಿದ್ದಾರೆ. ನೀವು ಏಕೆ ಅನುಮತಿ ಕೊಡಲಿಲ್ಲ? ತುಂಬಾ ನಷ್ಟ ಮಾಡುತ್ತಿದೆ. ಅವನ್ನು ಹಿಡಿದು ಅರಣ್ಯಕ್ಕೆ ಬಿಡಲು ಅನುಮತಿ ಕೊಡಿ ಎಂದು ಕೇಳಿದರೆ ನೀವು ಅನುಮತಿ ಏಕೆ ಕೊಟ್ಟಿಲ್ಲ. ಅದಕ್ಕೇ ನಾನು ಹೇಳಿದ್ದು ನನಗೆ ಗೊತ್ತಿದೆ, ನೀವೇ ಚೆನ್ನಾಗಿದ್ದೀರಿ. ನೀವೇ ಆನೆ ಹಿಡಿಯಿರಿ. ಇಲ್ಲ ಎಂದು ನಾನು ಹೇಳುತ್ತಿಲ್ಲ. ಆ ಶಕ್ತಿ ನಿಮಗೆ ಇದೆ. ಆದರೆ ನಿಮ್ಮ ಆನೆಗಳು ಎಂದು ಹೇಳಿದ್ದು...ಬಡವರ ಬೆಳೆಯನ್ನು ನಷ್ಟ ಮಾಡಲು ಅವಕಾಶ ಮಾಡಿಕೊಡಬೇಡಿ.

ಅಧ್ಯಕ್ಷರು:- ಮಾನ್ಯ ಗುರಪಾದಪ್ಪನವರೇ, ಪ್ರಶ್ನೆ ಇಷ್ಟೇ. ಜಿಲ್ಲಾ ಮಟ್ಟದಲ್ಲಿ ಈ ಪರಿಹಾರ ವಿತರಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಿದರೆ ಶೀಘ್ರ ಮಟ್ಟದಲ್ಲಿ ಆಗುತ್ತದೆ, ಎನ್ನ ತಕ್ಕದ್ದು ಒಂದು. ತಾವು ಏನು ಗಸ್ತು ತಂಡಗಳನ್ನು ನೇಮಕ ಮಾಡಿದ್ದೇವೆ ಎಂದು ಹೇಳಿದ್ದೀರಿ ಅವುಗಳು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು. ಗಸ್ತು ತಿರಗುತ್ತಾ ಇಲ್ಲ ಎಂದು ಹೇಳುತ್ತಿದ್ದಾರೆ. ಇನ್ನೂ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು.

ಶ್ರೀ ಗುರಪಾದಪ್ಪ ನಾಗಮಾರಪಲ್ಲಿ: ಉತ್ತರವನ್ನು ಒಂದೇ ಸಾರಿ ಹೇಳಲೇ?

ಶ್ರೀ ಬಿ.ಬಿ. ಶಿವಪ್ಪ: ಪರಿಹಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಪರಿಹಾರ ಯಾವುದೇ ರೀತಿಯಲ್ಲಿ ಗೋಲೀ ಬಾರ್ ಆಗಲೀ ಅಥವಾ ಬೇರೆ ಯಾವುದೇ ಸಂದರ್ಭದಲ್ಲಿ ಸತ್ತರೂ ಕೂಡ ಪರಿಹಾರ ಒಂದು ಲಕ್ಷ ರೂಪಾಯಿ ಕೊಡತಕ್ಕ ವ್ಯವಸ್ಥೆ ಇದೆ. ಆನೆ ತುಳಿತಕ್ಕೆ ಒಳಗಾಗಿ ಸತ್ತಂತಹವರಿಗೆ 25 ಸಾವಿರ ರೂಪಾಯಿ ಮೊತ್ತವನ್ನು ನಿಗದಿ ಪಡಿಸಿದ್ದಾರೆ. ಇದನ್ನು ಹೆಚ್ಚು ಪಡಿಸಬೇಕು ಎಂದು ನಾನು ಕಳೆದ ಸಾರಿ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಒಂದು ಸಾವಿರ ರೂಪಾಯಿಯವರೆಗೆ ಪರಿಹಾರ ಕೊಡುವಂತಹ ಒಂದು ವ್ಯವಸ್ಥೆಯನ್ನು ತಾವು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಕೊಟ್ಟಿದ್ದೀರಿ. ಆದರೆ ಬೆಳೆ ನಷ್ಟ ಎಷ್ಟು ಆಗಿದೆ, ಪರಿಹಾರ ಏನು ಕೊಡಬೇಕು ಎಂದು ತೀರ್ಮಾನ ಮಾಡತಕ್ಕವರು, ಅವರು ಏನು ಪರಿಹಾರ ಕೊಡಲಿಕ್ಕೆ ಇದೆ, ಅದಕ್ಕೆ ತಕ್ಕಂತೆ ತೀರ್ಮಾನ ಮಾಡುತ್ತಾರೆ. ಅದು ಆಗಬಾರದು. ಅವನಿಗೆ ನಿಜವಾಗಿ ಎಷ್ಟು ನಷ್ಟ ಆಗಿದೆ, ಅಷ್ಟು ಗುರುತು ಮಾಡಲಿ. ನಷ್ಟ ಎಷ್ಟು ಆಗಿದೆ ಎಂದು ಗುರುತು ಮಾಡಿ ಪರಿಹಾರ ನೀವು ಎಷ್ಟು ಕೊಡುತ್ತೀರೋ ಅಷ್ಟು ಕೊಡಿ. ಅದರ ವಿಚಾರ ಬೇರೆ. ಆದರೆ ಸರ್ಕಾರಕ್ಕೆ ವರದಿ ಬರುವಾಗ ಸತ್ಯಾಂಶ ಬರಬೇಕು. ಇವರಿಗೆ ಇಷ್ಟು ಲಕ್ಷದ ಬೆಳೆ ನಷ್ಟ ಆಗಿದೆ, ನಮಗೆ ಕೊಡಲಿಕ್ಕೆ ಇರುವ ಅಧಿಕಾರ ಕೇವಲ ಒಂದು ಸಾವಿರ ರೂಪಾಯಿ ನಾವು ಅದನ್ನು ಕೊಟ್ಟಿದ್ದೇವೆ ಎಂದು ತಿಳಿಸಲಿ. ಅವರು ಕೇವಲ ಒಂದೇ ಸಾವಿರ ರೂಪಾಯಿಯ ಲೆಕ್ಕಚಾರ ಮಾಡಿ ಕಳುಹಿಸುತ್ತಾರೆ. ಇದು ಆಗಬಾರದು. ಸತ್ತವರಿಗೆ ಎಲ್ಲಾ ಸಂದರ್ಭದಲ್ಲಿ ಒಂದು ಲಕ್ಷ ರೂಪಾಯಿ ಪರಿಹಾರ ಕೊಡುವ ಹಾಗೆ ಇಲ್ಲಿಯೂ ಕೊಡಬೇಕು.

ಅಧ್ಯಕ್ಷರು: ಒಂದು ಪ್ರಶ್ನೆಗೆ ಎಷ್ಟು ಜನ ಉಪ ಪ್ರಶ್ನೆ ಕೇಳುವುದು? ಒಬ್ಬರು ಕೇಳಿದರೆ ಸಾಕು. ಎಲ್ಲಾ ಮಲೆನಾಡಿನವರೂ ಏಳುತ್ತೀರಿ. ಸ್ವಲ್ಪ ದಯಮಾಡಿ ಸಹಕರಿಸಿ. ನಾನು ಬಹಳ ಲಿಬರಲ್ ಆಗಿದ್ದೇನೆ, ನೀವು ಸ್ವಲ್ಪ ನನ್ನನ್ನು ಅರ್ಥ ಮಾಡಿಕೊಳ್ಳಬೇಕು. ತಾವು ಮಂತ್ರಿಗಳು ಉತ್ತರ ಕೊಡಿ, ಇನ್ನು ಸಪ್ಲಿಮೆಂಟರಿಗಳು ಬೇಡ. ನನಗೆ ಏನು ತೋಚುತ್ತದೆ ಎಂದರೆ ಅಫೆಕ್ಟೆಡ್ ಏರಿಯಾಸ್ ಎಲ್ಲೆಲ್ಲಿ ಇರುತ್ತದೆ, ನೀವು ಅದರ ಬಗ್ಗೆ ಇನ್ಸೂರೆನ್ಸ್ ಏನಾದರೂ ಮಾಡಬಹುದೇ

ಎಂಬುದನ್ನು ವಿಚಾರ ಮಾಡಿ.

ಶ್ರೀ ಗುರಪಾದಪ್ಪ ನಾಗಮಾರಪಲ್ಲಿ: ಗಸ್ತು ತಂಡ ಹೋಗುತ್ತಿಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ನಾನು ಗಸ್ತು ತಂಡ ಶೀಘ್ರವಾಗಿ ಹೋಗುವ ಹಾಗೆ ವ್ಯವಸ್ಥೆ ಮಾಡುತ್ತೇನೆ. ಇದೊಂದು. ಎರಡನೆಯದು ಪರಿಹಾರದ ವಿಚಾರ. ಎಷ್ಟು ನಷ್ಟ ಆಗಿದೆ ಅಷ್ಟು ಅಂದಾಜು ಮಾಡುವುದು ಬಹಳ ಮುಖ್ಯವಾಗಿದೆ, ಅದನ್ನು ಅಂದಾಜು ಮಾಡಿಸುತ್ತೇನೆ. ಪರಿಹಾರ ಎಷ್ಟು ಕೊಡುವುದಕ್ಕೆ ಸಾಧ್ಯ ಇದೆಯೋ ಅಷ್ಟನ್ನು ಕೊಡೋಣ. ಆದರೆ ಅಂದಾಜು ಮಾಡಿಸುವುದು ತಪ್ಪು ಮಾಡುವುದಿಲ್ಲ. ಇನ್ನೊಂದು ಮಾತು ಇಲ್ಲೇ ಘೋಷಣೆ ಮಾಡಿದ ಹಾಗೆ ಈ ಸದನದಲ್ಲಿ ಹೇಳುತ್ತೇನೆ. 25 ಸಾವಿರ ರೂಪಾಯಿ ಒಂದು ಆನೆ ತುಳಿತಕ್ಕೆ ಪರಿಹಾರ ಕೊಡತಕ್ಕದ್ದು ನಿಜ; ಹುಲಿ ತುಳಿತಕ್ಕೆ ಸಿಕ್ಕಿ ಸತ್ತರೆ 25 ಸಾವಿರ ರೂಪಾಯಿ ಪರಿಹಾರ ಕೊಡತಕ್ಕದ್ದು ನಿಜ. ಬೇರೆ ಎಲ್ಲಾದರೂ ಕಡೆ ಸತ್ತರೆ ಒಂದು ಲಕ್ಷ ರೂಪಾಯಿ ಪರಿಹಾರ ಕೊಡುತ್ತಾರೆ. ನಾನೂ ಕೂಡ ಒಂದು ಲಕ್ಷ ರೂಪಾಯಿ ಮಾಡಬೇಕೆಂದು ವಿಚಾರ ಬಂದಿದೆ, ಒಂದು ಲಕ್ಷ ರೂಪಾಯಿ ಮಾಡುತ್ತೇನೆ. ವಿಶೇಷವಾಗಿ ಸರ್ಕಾರದ ಕಡೆಯಿಂದ ಹೆಚ್ಚು ಅಂದರೆ ಒಂದು ಲಕ್ಷ ರೂಪಾಯಿ ಮಾಡುತ್ತೇನೆ. ಮತ್ತು 10 ಸಾವಿರ ರೂ. ಇರುವುದನ್ನು 20 ಸಾವಿರ ರೂ. ಮಾಡುತ್ತೇನೆ, ಐದು ಸಾವಿರ ರೂ. ಇದ್ದದ್ದನ್ನು ಹತ್ತು ಸಾವಿರ ರೂಪಾಯಿ ಮಾಡುತ್ತೇನೆ. ಒಂದಕ್ಕೆ ಎರಡು ಪ್ರಕಾರ ಮಾಡಿ ಒಳ್ಳೆಯ ರೀತಿಯಲ್ಲಿ ಜನಕ್ಕೆ ಸಹಾಯ ಮಾಡುವ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇನೆ. ಎಲ್ಲಿ ಆನೆ ತೊಂದರೆ ಇದ್ದರೂ ಅದನ್ನು ಹಿಡಿದು ಹಾಕಿಸುತ್ತೇನೆ.

716 (85) ಶ್ರೀ ಎನ್.ರಾಜಣ್ಣ (ವಿಧಾನಸಭಾ ಸದಸ್ಯರು):

ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) 1997ರ ಜನವರಿಯಿಂದ ಬೆಂಗಳೂರು ನಗರದ ವೃತ್ತಿಪರ ಕಾಲೇಜುಗಳಲ್ಲಿ ವರದಿಯಾಗಿರುವ ರ್‍ಯಾಗಿಂಗ್ ಪ್ರಕರಣಗಳೆಷ್ಟು;

(ಆ) ರಾಜ್ಯದಲ್ಲಿ ರ್‍ಯಾಗಿಂಗ್‌ನ್ನು ನಿಷೇಧಿಸಲು ಕ್ರಮ ಕೈಗೊಳ್ಳಲಾಗುತ್ತಿದೆಯೇ;

(ಇ) ಈ ದಿಸೆಯಲ್ಲಿ ಶಾಸನ ಅಳವಡಿಸಲು ಸರ್ಕಾರವು ಪರಿಶೀಲಿಸುತ್ತಿದೆಯೇ;

a) the number of ragging incidents reported in professional colleges from January 1997 in Bangalore city;

b) whether there is any act to ban ragging in the State;

c) will the Government consider to introduce a Legislation in this regard?

ಬಿ.ಸೋಮಶೇಖರ (ಉನ್ನತ ಶಿಕ್ಷಣ ಸಚಿವರು.)

(ಅ) ಒಂದು

(ಆ) ಈಗಾಗಲೇ ನಿಷೇಧಿಸಲಾಗಿದೆ.

(ಇ) 1983ರ ಕರ್ನಾಟಕ ಶಿಕ್ಷಣ ಅಧಿನಿಯಮದ 116ನೇ ಪ್ರಕರಣದಲ್ಲಿ ಈಗಾಗಲೇ ಉಪಬಂಧವನ್ನು